
# ವಿದ್ಯಾರ್ಥಿಗಳಿಗಾಗಿ ವಿವೇಕಾನಂದರು

## ಇಚ್ಛಾಶಕ್ತಿ



**ಕ**ಡೆಯ ತನಕ ಎಲ್ಲರೂ ಪರಿಶ್ರಮ ಪಡದೆ, ಏನನ್ನಾದರೂ ಸಾಧಿಸಲು ಸಾಧ್ಯವೇ? 'ಕಾರ್ಯತತ್ಪರನಿಗೆ, ಸಿಂಹಹೃದಯವುಳ್ಳವನಿಗೆ ಮಾತ್ರವೇ ಲಕ್ಷ್ಮಿಯು ಒಲಿಯುವಳು.' ಹಿಂದೆ ನೋಡುವ ಆವಶ್ಯಕತೆಯಿಲ್ಲ. ಮುನ್ನುಗ್ಗಿ! ನಮಗೆ ಬೇಕಾಗಿರುವುದು ಅನಂತ ಶಕ್ತಿ, ಅಪರಿಮಿತ ಉತ್ಸಾಹ, ಮತ್ತು ಅಸಾಧಾರಣ ಸಹನೆ. ಆಗ ಮಾತ್ರವೇ ಮಹಾನ್ ಕಾರ್ಯಗಳನ್ನು ಸಾಧಿಸಲು ಸಾಧ್ಯ.

ಎದ್ದುನಿಂತು ಹೋರಾಡು! ಒಂದು ಹೆಜ್ಜೆಯೂ ಹಿಂದಿಡಬೇಡ, ಇದೇ ನಿನ್ನ ಭಾವನೆಯಾಗಲಿ. ಏನಾದರೂ ಆಗಲಿ, ಹೋರಾಟ ಮಾಡಿಯೇ ತೀರು. ಆಕಾಶದಿಂದ ನಕ್ಷತ್ರಗಳೇ ಅಲ್ಲಾಡಲಿ! ಇಡೀ ಪ್ರಪಂಚವೇ ನಮಗೆ ಎದುರಾಗಿರಲಿ! ಸಾವೆಂದರೆ ಬಟ್ಟೆಯನ್ನು ಬದಲಿಸುವುದು, ಅಷ್ಟೆ. ಅದರಿಂದ ಏನು? ಹೀಗಾಗಿ ಹೋರಾಡು!

ಹೇಡಿಗಳಾಗುವುದರಿಂದ ನೀವು ಏನನ್ನೂ ಸಾಧಿಸಿದ ಹಾಗೆ ಆಗುವುದಿಲ್ಲ. ಒಂದು ಹೆಜ್ಜೆ ಹಿಂದೆ ಇಟ್ಟು, ನೀವು ಯಾವ ದುರದೃಷ್ಟವನ್ನೂ ತಪ್ಪಿಸಿಕೊಳ್ಳಲಾಗುವುದಿಲ್ಲ.

"ಎಲ್ಲವೂ ನನ್ನಲ್ಲಿಯೇ ಇದೆ. ಅದನ್ನು ನನ್ನ ಇಚ್ಛಾನುಸಾರ ನಾನು ಪ್ರಕಟಗೊಳಿಸಬಲ್ಲೆ." ಎಂದು ಹೇಳಿರಿ.

"ನನಗೇನೂ ಗೊತ್ತಿಲ್ಲ" ಎಂದು ಹೇಳಿಕೊಳ್ಳುವುದು ಅದೆಂಥ ವಿಚಿತ್ರ ವಿನಯ! "ನಾನು ಏನೂ ಅಲ್ಲ" ಎಂದು ಹೇಳಿಕೊಳ್ಳುವುದು ಹುಸಿ ತ್ಯಾಗ ಮತ್ತು ಕೃತಕವಿನಯ ಎಂದು ನಾನು ನಿಮಗೆ ಹೇಳುತ್ತೇನೆ. ಅಂಥ ಆತ್ಮವಿನಾಶಕವಾದ ಮನೋಭಾವವನ್ನು ತ್ಯಜಿಸಿ.

ಹಿಂದೆ ನೋಡುವ ಅಗತ್ಯವಿಲ್ಲ. ಮುಂದೆ ಸಾಗು! ನಮಗೆ ಅನಂತ ಶಕ್ತಿ ಬೇಕು, ಅನಂತ ಉತ್ಸಾಹ, ಅನಂತ ಧೈರ್ಯ ಮತ್ತು ಅಪಾರ ಸಹನೆ ಬೇಕು. ಆಗ ಮಾತ್ರವೇ ಮಹಾನ್ ಕಾರ್ಯಗಳನ್ನು ಸಾಧಿಸಲು ಸಾಧ್ಯ.

## ಯುವ ಕುಶಲೋಪರಿ

**ಪ್ರಶ್ನೆ :** ಯೌವನದಲ್ಲಿ ಬರುವ ಸಮಸ್ಯೆಗಳನ್ನು ಎದುರಿಸುವುದು ಹೇಗೆ ?


**ಉತ್ತರ :** ಜೀವನವೇ ಒಂದು ಸಂಗ್ರಾಮ. ಬಾಳಿನ ಎಲ್ಲ ಕಾಲದಲ್ಲಿಯೂ ಒಂದಲ್ಲ ಒಂದು ಸಮಸ್ಯೆ ಇದ್ದೇ ಇರುತ್ತದೆ. ಆದರೆ ಯೌವನದಲ್ಲಿ ಬರುವ ಸಮಸ್ಯೆಗಳು ವಿಚಿತ್ರ ರೀತಿಯವು. ಅವು ಮುಂದಿನ ಬಾಳಿನ ದಿಕ್ಕನ್ನು ನಿರ್ಧರಿಸುವಂಥವು. ಆದರೆ ಯೌವನದಲ್ಲಿ ಅವಕ್ಕೆ ಸರಿಯಾದ ಪರಿಹಾರ ಕಂಡುಕೊಳ್ಳುವ ಪ್ರಬುದ್ಧತೆ ಇರುವುದಿಲ್ಲ, ಮಾನಸಿಕ ಶಕ್ತಿಯೂ ಕಡಿಮೆ. ಹೀಗಾಗಿ ಪರಿಹಾರಕ್ಕಾಗಿ ಹಿರಿಯರ, ಜ್ಞಾನಿಗಳ ಮಾರ್ಗದರ್ಶನ ಪಡೆದುಕೊಳ್ಳುವುದು ಒಳಿತು. ಅಂಥ ಕೆಲವು ಪ್ರಮುಖ ಸಮಸ್ಯೆಗಳು ಹೀಗಿವೆ: **ಲೈಂಗಿಕ ಸಮಸ್ಯೆ, ಭವಿಷ್ಯದ ಬಗ್ಗೆ ಕಾತರ, ವಿದ್ಯಾಭ್ಯಾಸದಲ್ಲಿ ಸೋಲು, ಎಲ್ಲವನ್ನೂ ಹಗುರವಾಗಿ ತೆಗೆದುಕೊಂಡು ಕಷ್ಟಪಡುವುದು, ಸ್ನೇಹಿತರು ಅಥವಾ ಸಂಗಾತಿಗಳ ಸಮಸ್ಯೆ, ವಿಪರೀತ ಚಂಚಲತೆ, ಕೋಪ ಅಸೂಯೆ ಮುಂತಾದ ಭಾವನೆಗಳು ತೀವ್ರರೂಪದಲ್ಲಿ ಪ್ರಕಟವಾಗುವುದು, ಆತ್ಮವಿಶ್ವಾಸದ ಕೊರತೆ, ಭಯ, ಅಂಜಿಕೆ, ತನ್ನ ಬಗ್ಗೆ ತನಗೆ ತಪ್ಪು ಅಭಿಪ್ರಾಯ, ವಾಸ್ತವಪ್ರಜ್ಞೆಯ ಅಭಾವ** ಮುಂತಾದವು.


ಈ ಎಲ್ಲ ಸಮಸ್ಯೆಗಳಿಗೂ ಸೂಕ್ತ ಸಮಾಧಾನ ಖಂಡಿತ ಇದೆ. ಇವೆಲ್ಲವೂ ಬರುವುದು ಶ್ರದ್ಧೆಯ ಅಭಾವದಿಂದ. ಶ್ರದ್ಧೆ ಎಂದರೆ **ಸಕಾರಾತ್ಮಕ ಮನೋಭಾವ, ಆತ್ಮವಿಶ್ವಾಸ, ಹಿರಿಯರಲ್ಲಿ ಗೌರವ, ದೊಡ್ಡವರ ಮಾತಿನಲ್ಲಿ ನಂಬಿಕೆ** ಮುಂತಾದ ಉದಾತ್ತಗುಣಗಳ ಸುಮಧುರ ಮಿಶ್ರಣ. ಒಬ್ಬನ ವ್ಯಕ್ತಿತ್ವ ಅವನಲ್ಲಿರುವ ಶ್ರದ್ಧೆಯ ಪ್ರಮಾಣದ ಮೇಲೆ ನಿರ್ಧಾರಿತವಾಗುತ್ತದೆ. ಎಲ್ಲ ಸಮಸ್ಯೆಗಳನ್ನೂ ಎದುರಿಸಿ ಗೆದ್ದುನಿಲ್ಲುವ ಸಾಮರ್ಥ್ಯ ತನ್ನಲ್ಲಿ ಇದ್ದೇ ಇದೆ ಎನ್ನುವ ಶ್ರದ್ಧೆ ಮೂಡಿದಾಗ, ಬಹುತೇಕ ತೊಂದರೆಗಳು ಮಾಯವಾಗುತ್ತವೆ. ಶ್ರದ್ಧೆ ಎನ್ನುವುದು ಮನಸ್ಸಿನ ಗುಣ. ಅದನ್ನು ಕಾರ್ಯರೂಪಕ್ಕೆ ತಂದಾಗ ಅದು 'ಪರಿಶ್ರಮ' ಎಂದು ಕರೆಸಿಕೊಳ್ಳುತ್ತದೆ. ಹೀಗೆ ಪರಿಶ್ರಮ ಪಡಲು **ಆಸಕ್ತಿ, ಇಚ್ಛಾಶಕ್ತಿ, ಏಕಾಗ್ರತೆ** – ಇವೆಲ್ಲ ಅವಶ್ಯ. ಆಗ ಎಂತಹ ಕಷ್ಟದ ಕೆಲಸವಾದರೂ ಸುಲಭವಾಗಿ ತೋರುತ್ತದೆ. ಇದಲ್ಲದೆ, ಸಮಸ್ಯೆಗಳ ಬಗ್ಗೆ ಸರಿಯಾದ ಅರಿವು ಪರಿಣಾಮಕಾರಿ ಪರಿಹಾರವಾಗಬಲ್ಲದು. ಏಕೆಂದರೆ, ಅನೇಕ ಸಮಸ್ಯೆಗಳು ನಮ್ಮ ಮನಸ್ಸಿನ ಭ್ರಮೆಯ ರೂಪದಲ್ಲಿ ಇರುತ್ತವೆ, ಅಷ್ಟೆ. ಇಂಥ ಸರಿಯಾದ ಅರಿವಿನ ಸಂಪಾದನೆಗೆ **ಮಾನಸಿಕ ಶಕ್ತಿ, ಇಂದ್ರಿಯ ಹತೋಟಿ, ಭಾವನೆಗಳ ನಿಯಂತ್ರಣ** ಅಗತ್ಯ. **ಮಾನಸಿಕ ದೃಢತೆ, ಕೆಲಸದಲ್ಲಿ ಒಮ್ಮನಸ್ಸು ಮತ್ತು ಕೋಪ, ದ್ವೇಷ ಮುಂತಾದ ಭಾವನೆಗಳ ನಿಯಂತ್ರಣ** – ಇವು ಜೀವನಕ್ಕೆ ಸಮತೋಲನವನ್ನು ತಂದುಕೊಡುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ, ನಾವು ಪರಿವರ್ತನೆ ಹೊಂದಿಯೇ ಹೊಂದುತ್ತೇವೆ ಎನ್ನುವ ದೃಢಸಂಕಲ್ಪ ಬಹಳ ಮುಖ್ಯ. ಈ ಸತ್ಸಂಕಲ್ಪ ಮಾಡಿಕೊಂಡು, ಪರಿಶ್ರಮದಿಂದ ಕಾರ್ಯೋನ್ಮುಖರಾದರೆ, ಎಲ್ಲ ಸಮಸ್ಯೆಗಳನ್ನೂ ಮೆಟ್ಟಿನಿಲ್ಲಬಹುದು. (ಬರಹ : ಸಂ.)

# ಸ್ವಾಮಿ ವಿವೇಕಾನಂದರ ಜೀವನದರ್ಶನ – ೪


**ನಿರೂಪಣೆ:** ಸ್ವಾಮಿ ರಾಘವೇಶಾನಂದ ; **ಅನುವಾದ :** ಸಿ.ಎಸ್.ಮಂಗಳಮ್ಮ; **ಮೂಲ ಕಲಾಕೃತಿ :** ಪದ್ಮಾ ವಾಸನ್; **ವರ್ಣಪಾರದರ್ಶಿಕೆ:** ಬಿ.ಕೆ.ಸೋಮಶೇಖರ

ಐದು ವರ್ಷಗಳಿಗೂ ಹೆಚ್ಚಾಗಿ ಸಾಧನೆಯಲ್ಲಿ ತೊಡಗಿದ ನರೇಂದ್ರನಿಗೆ ಅನೇಕ ವಿಧವಾದ ದಿವ್ಯದರ್ಶನಗಳಾದವು. ಶ್ರೀರಾಮಕೃಷ್ಣರು, ಭವಿಷ್ಯದಲ್ಲಿ ತಮ್ಮ ಅಧ್ಯಾತ್ಮ ಸಂದೇಶವನ್ನು ಜಗತ್ತಿನಾದ್ಯಂತ ಸಾರಬಲ್ಲ ಕೆಲವು ಯುವ ಅಂತರಂಗ ಶಿಷ್ಯರುಗಳಿಗೆ ಮಾರ್ಗದರ್ಶಕನನ್ನಾಗಿ ನರೇಂದ್ರನನ್ನು ನೇಮಿಸಿದರು. ಶ್ರೀರಾಮಕೃಷ್ಣರು ಭಯಂಕರವಾದ ಕ್ಯಾನ್ಸರ್ ರೋಗಕ್ಕೆ ತುತ್ತಾದಾಗ, ನರೇಂದ್ರನನ್ನು ತಮ್ಮ ಹಾಸಿಗೆಯ ಹತ್ತಿರಕ್ಕೆ ಕರೆದು, ತಮ್ಮ ತಪಸ್ಸಿನ ಶಕ್ತಿಯನ್ನೆಲ್ಲ ಅವನಿಗೆ ಧಾರೆ ಎರೆದುಬಿಟ್ಟರು.




ಶ್ರೀರಾಮಕೃಷ್ಣರ ಮಹಾಸಮಾಧಿಗೆ ಎರಡು ದಿನಗಳ ಮುಂಚೆ, ನರೇಂದ್ರನ ಮನಸ್ಸಿನಲ್ಲೊಂದು ಆಲೋಚನೆ ಮೂಡಿತು.
ನಾನು ಕೇಳದೆಯೇ, ತಾವು ಅವತಾರಪುರುಷರೆಂದು ಇವರು ತಿಳಿಸಿದರೆ, ನಾನು ಅದನ್ನು ಖಂಡಿತವಾಗಿ ಒಪ್ಪಬಲ್ಲೆ.
ನರೇಂದ್ರ, ಇನ್ನೂ ನಿನಗೆ ನಂಬಿಕೆ ಉಂಟಾಗಲಿಲ್ಲವೇ? ಯಾರು ರಾಮನಾಗಿ ಜನಿಸಿದ್ದನೋ, ಯಾರು ಕೃಷ್ಣನಾಗಿ ಅವತಾರವೆತ್ತಿದ್ದನೋ, ಈಗ ಆತನೇ ರಾಮಕೃಷ್ಣನಾಗಿ ಅವತಾರವೆತ್ತಿದ್ದಾನೆ.
ಶ್ರೀರಾಮಕೃಷ್ಣರು ೧೮೮೬, ಆಗಸ್ಟ್ ೧೬ ರಂದು ಮಹಾಸಮಾಧಿ ಹೊಂದಿದರು. ನರೇಂದ್ರನ ಪ್ರಭಾವದಿಂದ ಕೆಲವು ಶಿಷ್ಯರು ತಮ್ಮ ತಮ್ಮ ಮನೆಗಳನ್ನು ತ್ಯಜಿಸಿ, ಅಧ್ಯಾತ್ಮಸಾಧನೆಯಲ್ಲಿ ಜೀವನ ನಡೆಸಲು ಸಿದ್ಧರಾದರು.
ಸತ್ಯಸಾಕ್ಷಾತ್ಕಾರಕ್ಕಾಗಿ ಕಠಿಣ ಸಾಧನೆಯಲ್ಲಿ ಬದುಕನ್ನು ಸಾಗಿಸೋಣ.

ಮುಂದಿನ ಕೆಲವು ತಿಂಗಳುಗಳಲ್ಲಿ ಶ್ರೀರಾಮಕೃಷ್ಣರ ಯುವ ಶಿಷ್ಯರೆಲ್ಲರೂ ದೀಕ್ಷಾವಿಧಿಯಂತೆ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಸಂನ್ಯಾಸಿಗಳಾದರು. ಅವರೆಲ್ಲ ಕೂಡಿ, ಕೊಲ್ಕೊತಾದಲ್ಲಿನ ಬಾರಾನಗರದ ಒಂದು ಪಾಳುಮನೆಯಲ್ಲಿ ಸಂನ್ಯಾಸಿಗಳ ಮಠವನ್ನು ಸ್ಥಾಪಿಸಿದರು. ನರೇಂದ್ರನ ಮಾರ್ಗದರ್ಶನದಲ್ಲಿ ದೈವಸಾಕ್ಷಾತ್ಕಾರಕ್ಕಾಗಿ ಕಠಿಣ ಸಾಧನೆಗಳಲ್ಲಿ ತೊಡಗಿದರು. ಆ ದಿನಗಳಲ್ಲಿ ಬೇರೆ ಯಾವ ಕಡೆಗೂ ಗಮನವೀಯದೆ, ಏಕಾಗ್ರಚಿತ್ತದಿಂದ ಪೂಜೆ, ಆರಾಧನೆ, ಸದ್ಗ್ರಂಥಗಳ ಅಧ್ಯಯನ, ಚಿಂತನ, ಮನನ, ಭಜನೆ, ಹರಿಕೀರ್ತನೆಗಳಲ್ಲಿಯೇ ಅವರೆಲ್ಲ ದಿನವಿಡೀ ಕಳೆಯುತ್ತಿದ್ದರು.



ಶ್ರೀರಾಮಕೃಷ್ಣರಲ್ಲಿ ಸಂಪೂರ್ಣ ಭರವಸೆಯನ್ನಿಟ್ಟು, ಪರಿವ್ರಾಜಕನಾಗಿ ಸಂಚರಿಸಲು ಸ್ವಾಮಿ ವಿವೇಕಾನಂದರು ಸಿದ್ಧರಾದರು.